ಅ) ಚಿಕ್ಕನಾಯಕನ ಹಳ್ಳಿಗೆ ತುಮಕೂರು ಜಿಲ್ಲಾ ಕೇಂದ್ರವು 70 ಕಿ.ಮೀ. ದೂರದಲ್ಲಿದ್ದು, ಬಸ್ಸಿಗೆ ಸೌಕರ್ಯ ಹೆಚ್ಚಾಗಿರುವುದರಿಂದ ತುಮಕೂರು ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿಯೇ ಉಳಿಯಬಾರದೇಕೆ?

ಶ್ರೀ ಹೆಚ್. ವಿಶ್ವನಾಥ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ), ಆ) ತುಮಕೂರು ಚಿಕ್ಕನಾಯಕನ ಹಳ್ಳಿ ತಾಲ್ಲೂಕ್ ಅನ್ನು ಶೈಕ್ಷಣಿಕ ಜಿಲ್ಲಾ ಉಪ ನಿರ್ದೇಶಕರ ವ್ಯಾಪ್ತಿಯಲ್ಲಿಯೇ ಉಳಿಸಿ ದಿನಾಂಕ:26-3-2001ರ ತಿದ್ದುಪಡಿ ಆದೇಶ ಸಂಖ್ಯೆ ಇಡಿ 307 ಡಿಪಿಐ 2000ನಲ್ಲಿ ಹೊರಡಿಸಲಾಗಿದೆ.

ಚಿಕ್ಕನಾಯಕನ ಹಳ್ಳಿಯ ಪ್ರಥಮ ದರ್ಜೆ ಕಾಲೇಜಿನ ಕಟ್ಟಡ

2626(2998) ಶ್ರೀ ಸುರೇಶ್ ಬಾಬು ಸಿ.ಬಿ. (ಚಿಕ್ಕನಾಯಕನಹಳ್ಳಿ) :— ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಚಿಕ್ಕನಾಯಕನ ಹಳ್ಳಿಯ ಪ್ರಥಮ ದರ್ಜೆ ಕಾಲೇಜಿನ ಕಟ್ಟಡ ನಿರ್ಮಾಣ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಕಾಲೇಜಿನ ಕಟ್ಟಡ ನಿರ್ಮಾಣದ ಕಾರ್ಯ ಪುನ: ಪ್ರಾರಂಭಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಕಾಲೇಜನ್ನು ಸ್ವಂತ ಕಟ್ಟಡದಲ್ಲಿ ಪ್ರಾರಂಭಿಸಲು ಬೇಕಾಗಿರುವ ಕಾಲಾವಕಾಶವೆಷ್ಟು;

ಶ್ರೀ ಡಾ: ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :—

ಅ) ಬಂದಿದೆ.

ಆ) ಈಗಾಗಲೇ ರೂ.12.00 ಲಕ್ಷದಲ್ಲಿ 3 ಕೊಠಡಿಗಳನ್ನು ಕಟ್ಟಲಾಗಿದ್ದು, ಇನ್ನು 3 ಕೊಠಡಿಗಳ ಅವಶ್ಯಕತೆ ಇದೆ. ಇಂತಹ ಅಪೂರ್ಣಗೊಂಡ ಕಟ್ಟಡಗಳನ್ನು ಗುರುತಿಸಿ ಹುಡ್ಕೊ ನೆರವಿನ ಯೋಜನೆ ರೂಪಿಸಲಾಗಿದ್ದು, ನೆರವು ದೊರೆತ ನಂತರ ಅವಶ್ಯಕತೆಗೆ ತಕ್ಕಂತೆ ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸಲಾಗುವುದು.

ಇ) ಸ್ವಂತ ಕಟ್ಟಡ ಪೂರ್ಣಗೊಂಡ ತಕ್ಷಣ ಕಾಲೇಜನ್ನು ಸ್ಥಳಾಂತರಿಸಲಾಗುವುದು.

ಚಿಕ್ಕನಾಯಕನ ಹಳ್ಳಿ 'ಕಾಮಲಾಪುರ' ಗ್ರಾಮದಲ್ಲಿ ನೂತನ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರಾತಿ